



ಆಸ್ಟ್ರೇಲಿಯದಲ್ಲಿ ಬೆಳೆಯುವ ಮೆಕಡೋಮಿಯ

ತಳಿಗನ್ನೂ ಜತನದಿಂದ ಬೆಳೆಸುತ್ತಿದ್ದಾರೆ.

'ಮಾಕಾಳೆರೆಡ್ ಹಲಸಿನ ತಳಿ ನಮ್ಮಲ್ಲಿ ಬಹಳ ಫೇಮಸ್. ನಮ್ಮೂರಿನ ವೇದಪ್ಪಗೌಡರ ಮನೆಯಲ್ಲೊಂದು ಅಪರೂಪದ ತಳಿ ಇತ್ತು. ಅದರ ಒಂದೇ ಒಂದು ಗಿಡ ಇದ್ದದ್ದು ಈಗ ಇಲ್ಲವಾಗಿದೆ. ಆದರೆ ಅದರ ಸಸಿ ತಂದು ನಮ್ಮ ತೋಟದಲ್ಲಿ ಬೆಳೆಸಿದ್ದೇವೆ. ಅದಕ್ಕೆ ವಿ–1 ಅಂತ ಹೆಸರಿಟ್ಟದ್ದು ಅದೂ ಕೂಡಾ ಸುತ್ತಮುತ್ತಲ ಜಿಲ್ಲೆಗಳಲ್ಲಿ ಈಗ ಅತ್ಯಂತ ಜನಪ್ರಿಯವಾಗಿದೆ. ಈ ಹಲಸಿನ ಸೊಳೆಗಳು ಎಷ್ಟು ಸ್ವೀಟ್ ಎಂದರೆ, ನಾನು ಹೊಗಳಿದರೆ ನೀವು ನಂಬಲಿಕ್ಕಿಲ್ಲ. ಈ ಹಲಸಿನ ಇನ್ನೊಂದು ಗುಣ ಎಂದರೆ ಎಷ್ಟು ತಿಂದರೂ ಹೊಟ್ಟೆ ಭಾರ ಎನ್ನಿಸುವುದಿಲ್ಲ' ಎನ್ನುತ್ತಾರೆ ಕೃಷ್ಣೇಗೌಡರು. ವಿ–1 ತಳಿಯ ಹಲಸಿನ ಹಣ್ಣನ್ನು ತಮ್ಮ ಕಾರಿನಲ್ಲಿ ಒಯ್ದವರು ಎಷ್ಟೋ ಮಂದಿ, 'ಹಣ್ಣು ತಿಂದು ಎರಡು ದಿನ ಕಳೆದರೂ ಕಾರಿನೊಳಗೆ ಹಲಸಿನ ಪರಿಮಳವೇ ಬರುತ್ತಿದೆ ಮಾರಾಯ್ರೆ' ಎಂದು ಸಂಭ್ರಮದಿಂದ ಹೇಳಿದ್ದುಂಟು.

ಗೌಡರ ತೋಟದಲ್ಲಿ ಬೆಳೆದಿರುವ ಹಲಸುಗಳ ವೈವಿಧ್ಯವನ್ನು ಬಣ್ಣಿಸುವುದು ಕಷ್ಟ. ಒಂದೊಂದು ಹಲಸಿನದ್ದೂ ಒಂದೊಂದು ವಿಶೇಷ. ಸದಾನಂದ ಹಲಸು, ಬಿ.ಡಿ. ವಿಟಿ ಹಲಸು, ಕೆಂಪು ರುದ್ರಾಕ್ಷಿ ಹಲಸು, ಹಳದಿ ರುದ್ರಾಕ್ಷಿ ಹಲಸು, ಹೇಮಚಂದ್ರ ಹಲಸು, ಲಾಲ್‌ಟಾಸ್ ಮಧುರ ಹಲಸು, ವಟಗರ ಹಲಸು, ವೇದಪ್ಪ ಗೌಡ ಹಲಸು– ಹೀಗೆ ಈ ತಳಿಗ ಹೆಸರುಗಳ ಪಟ್ಟಿ ಉದ್ದವಿದೆ.

ಥಾಯ್ಲೆಂಡಿನಿಂದ ತರಿಸಿ ಬೆಳೆಸಿದ ಕೆಂಪು ಹಲಸು, ಪಿಂಕ್ ಹಲಸು, ಮೇಣರಹಿತ ಹಲಸು, ಸರ್ವ ಋತುವಿನ ಹಲಸುಗಳೂ ಸಾಕಷ್ಟು ಜನಪ್ರಿಯವಾಗಿವೆ. ಹೆಚ್ಚು ಇಳುವರಿ, ಸಹಜ ರುಚಿ ಈ ಹಲಸುಗಳ ವೈಶಿಷ್ಟ್ಯ. ಈ ತಳಿಗಳನ್ನು ಅಭಿವೃದ್ಧಿ ಪಡಿಸಿ ಅವುಗಳ ಗಿಡಗಳನ್ನು ರೈತರಿಗೆ ಮಾರಾಟ ಮಾಡುತ್ತಿದ್ದಾರೆ. ಹೆದ್ದಾರಿ ಪಕ್ಕದಲ್ಲೇ ತೋಟ ಇರುವುದರಿಂದ ಅಲ್ಲಿ ಹಾದುಹೋಗುವ ನೂರಾರು ಜನರು ಬಂದು ತಳಿಗಳನ್ನು ಕೊಂಡೊಯ್ಯುವುದಿದೆ.

'ನಮಗೆ ಒಟ್ಟು 17 ಸಾವಿರ ಗ್ರಾಹಕರಿದ್ದಾರೆ. ಇವರೆಲ್ಲ ಆಗಾಗ್ಗೆ



ಬರುವವರೇ. ಪ್ರತಿ ವರ್ಷ 1ರಿಂದ 2 ಸಾವಿರ ಹೊಸ ಗ್ರಾಹಕರು ಸೇರ್ಪಡೆ ಆಗುತ್ತಿದ್ದಾರೆ. ಸರ್ಕಾರದ ಮಾನ್ಯತೆ ಇರುವ ನರ್ಸರಿ ನಮ್ಮದಾದ್ದರಿಂದ ಹೆಚ್ಚು ಜನ ಇಲ್ಲಿಗೇ ಬರುತ್ತಾರೆ' ಎನ್ನುವುದು ಗೌಡರು ಹೆಮ್ಮೆಯಿಂದ ಹೇಳುವ ಮಾತು. ಗೌಡರು ಬಿಡುವಿನ ಸಮಯದಲ್ಲಿ ವಿಶ್ವವಿದ್ಯಾನಿಲಯ, ಕಾಲೇಜು ಎಂದು ತಿರುಗಾಡಿ ಕೃಷಿಯ ಬಗ್ಗೆ ಪಾಠ ಮಾಡುತ್ತಾರೆ. ಸಂಶೋಧನೆ ಮಾಡುವ ಸಾಕಷ್ಟು ಹುಡುಗರು ಇವರ ತೋಟಕ್ಕೆ ಬಂದು ಕಲಿಯುತ್ತಿದ್ದಾರೆ. ಎರಡು ಬಾರಿ ರಾಷ್ಟ್ರಮಟ್ಟದ ಪ್ರಶಸ್ತಿಗಳೂ ಸಿಕ್ಕಿವೆ.

ಈ ಹಲಸಿನ ಕ್ರಾಂತಿಗೆ ಮುಕುಟವಿಟ್ಟಂತೆ ಇವರ ತೋಟದಲ್ಲಿ ಇನ್ನೂ ಹಲವಾರು ಬೆಳೆಗಳಿವೆ. ಬೀಜರಹಿತ ಪೇರಳೆ, ಪ್ಲಮ್, ಲಿಚ್ಚಿ, ಮ್ಯಾಂಗೋಸ್ಟಿನ್, ಸಿಹಿ ಹುಣಸೆ, ವುಡ್ ಆಪಲ್, ವೆಲ್ವೆಟ್ ಆಪಲ್, ಡ್ರಾಗನ್ ಫ್ರೂಟ್, ಲಾಂಗ್ ಆನ್ ಲಾಂಗ್ ಶಾಟ್, ಬಾರ್ಬೋಡಾಸ್ ಚೆರಿ, ಮೆಕಡೋಮಿಯ (ಆಸ್ಟ್ರೇಲಿಯನ್ ಗೋಡಂಬಿ) ಇತ್ಯಾದಿ ಗಿಡಗಳನ್ನೂ ದೊಡ್ಡ ಮಟ್ಟದಲ್ಲಿ ಬೆಳೆಯಿಸುತ್ತಿದ್ದಾರೆ.

'ಥಾಯ್ಲೆಂಡ್ ಒಂದು ತರಹ ತೋಟಗಾರಿಕೆಯ ಹಬ್ ಇದ್ದಂತೆ. ಅಲ್ಲಿ 2000 ಎಕರೆ ತೋಟವಿದೆ. ಮದರ್‌ಪ್ಲಾಂಟ್ ಮತ್ತು ನರ್ಸರಿ ಎರಡೂ ಇದೆ. ನಾನು ಅವರ ಬಹುದೊಡ್ಡ ಗ್ರಾಹಕ ಆಗಿರುವುದರಿಂದ ನನಗೆ ಆರ್ಡರ್ ಕೊಟ್ಟ ಗಿಡಗಳಲ್ಲದೆ ಕಾಂಪ್ಲಿಮೆಂಟರಿ ಆಗಿ ಅಮೆರಿಕನ್ ಬ್ಯೂಟಿ ಮಾವಿನಹಣ್ಣುಗಳನ್ನೂ ಕಳುಹಿಸುತ್ತಾರೆ. ಅವುಗಳ ರುಚಿಯೇ ಬೇರೆ' ಎನ್ನುತ್ತಾರೆ ಗೌಡರು.

ಅವರ ಕೃಷಿಯ ಮೂಲಧ್ಯೇಯ ಇಷ್ಟೇ– ಒಂದು ಮುಳ್ಳಿನ ಗಿಡ ಬೆಳೆಯುವಲ್ಲಿ ಒಂದು ಹಣ್ಣಿನ ಗಿಡ ಬೆಳೆಯಿರಿ; ಒಂದು ಕಳೆ ಕಿತ್ತು ಒಂದು ಬೆಳೆ ಬೆಳೆಯಿರಿ! ತಮ್ಮ ಜಮೀನಿನ ಎತ್ತರ, ದಿನ್ನೆ, ತಗ್ಗು, ಇಳಿಜಾರು ಎನ್ನದೆ ಮೂಲೆ ಮೂಲೆಯನ್ನೂ ವೈವಿಧ್ಯಮಯ ತಳಿಗಳನ್ನು ಬೆಳೆಸಲು ಉಪಯೋಗಿಸಿಕೊಂಡಿದ್ದು, ತಮ್ಮ ಧ್ಯೇಯವಾಕ್ಯವನ್ನು ಸ್ವತಃ ಅನುಸರಿಸಿದ್ದಾರೆ. (ಬಿ.ಆರ್.ಕೃಷ್ಣೇಗೌಡರ ಸಂಪರ್ಕಕ್ಕೆ: 94497 42477 ಸಂಪರ್ಕಿಸಬಹುದು.)